ಕರ್ನಾಟಕ ವಿಧಾನ ಸಭೆ ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕಾರ್ಮಿಕ ಇಲಾಖೆ

ಪತ್ರಿಕೆಯ ಹೆಸರು : TITLE OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 18/11/2019

# ಬಡ್ತಿ ಮೀಸಲು ಕೌತುಕ

## ಬಡ್ತಿ ಪ್ರಕರಣ ನ.25ರಂದು ಸುಪ್ರೀಂನಲ್ಲಿ ವಿಚಾರಣೆ


### ಮೀಸಲು ಅಸಂವಿಧಾನಿಕ ಎಂದಿರುವ ಮದ್ರಾಸ್ ಹೈಕೋರ್ಟ್

**ಶಶಿಧರ ಹೆಗಡೆ** ಬೆಂಗಳೂರು

ಬಡ್ತಿ ಮೀಸಲು ಅಸಂವಿಧಾನಿಕವೆಂದು ಮದ್ರಾಸ್ ಹೈಕೋರ್ಟ್ ಹೇಳಿದ್ದರಿಂದ ರಾಜ್ಯದಲ್ಲೂ ಈ ಪ್ರಕರಣಕ್ಕೆ ಮರುಜೀವ ಬರುವ ಸಾಧ್ಯತೆಯಿದೆ. ಬಿ.ಕೆ.ಪವಿತ್ರ ಜಡ್ಜ್‌ಮೆಂಟ್-2ರ ಮೇಲಿನ ಅಪ್ಲಿಕೇಷನ್ ಫಾರ್ ಡೈರೆಕ್ಷನ್ ಕುರಿತ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನ. 25ರಂದು ನಡೆಯಲಿದೆ.

**followup**

ರಾಜ್ಯದಲ್ಲಿ 1978ರಿಂದಲೂ ಬಡ್ತಿ ಮೀಸಲು ತಗಾದೆಯಿದೆ. ಸದ್ಯಕ್ಕೆ ಪವಿತ್ರ ಪ್ರಕರಣದ ಗೊಂದಲವಿದೆ. ಮೀಸಲಿನಡಿ ಬಡ್ತಿ ಹೊಂದಿದ ಎಸ್‌ಸಿ, ಎಸ್‌ಟಿ ನೌಕರರ ಹಿತರಕ್ಷಣೆಗೆ ಸರಕಾರ ತಂದಿರುವ ಕಾಯಿದೆಯನ್ನು ಎತ್ತಿ ಹಿಡಿದಿದ್ದ ಸುಪ್ರೀಂಕೋರ್ಟ್, 2019ರ ಮೇ 10ರಂದು (ಪವಿತ್ರ-2) ತೀರ್ಪು ಪ್ರಕಟಿಸಿದೆ. ಇದನ್ನು ಪ್ರಶ್ನಿಸಿರುವ ಸಾಮಾನ್ಯ ವರ್ಗದ ಎಂಜಿನಿಯರ್‌ಗಳು ಪವಿತ್ರ ಜಡ್ಜ್‌ಮೆಂಟ್ ಜಾರಿಯಲ್ಲಿನ ನ್ಯೂನತೆ ಸರಿಪಡಿಸಲು ನಿರ್ದೇಶನ (ಅಪ್ಲಿಕೇಷನ್ ಫಾರ್ ಡೈರೆಕ್ಷನ್) ಕೋರಿ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯನ್ನು ಡಿ.ವೈ.ಚಂದ್ರಚೂಡ್, ಉದಯ್ ಲಲಿತ್ ಇರುವ ಪೀಠ ಸ್ವೀಕರಿಸಿದೆ.



ನಾವು ಸಲ್ಲಿಸಿರುವ ಅರ್ಜಿ ವಿಚಾರಣೆ ನ.25ಕ್ಕೆ ಬರಲಿದೆ. ಈ ವೇಳೆ ತಮಿಳುನಾಡು ಪ್ರಕರಣವನ್ನೂ ಪ್ರಸ್ತಾಪಿಸಲಾಗುವುದು. ಈ ಸಂಬಂಧ ನಮ್ಮ ವಕೀಲರೊಂದಿಗೆ ಸಮಾಲೋಚಿಸಲಾಗುತ್ತಿದೆ.

**-ರಾಜೋಜಿ ರಾವ್** ಕೆಪಿಟಿಸಿಎಲ್ ಸಾಮಾನ್ಯ ವರ್ಗದ ಎಂಜಿನಿಯರ್‌ಗಳ ಸಂಘದ ಪ್ರಧಾನ ಕಾರ್ಯದರ್ಶಿ

3(a)

ಪೇಪರ್ ವಾರ್ತೆ

ವಿಜಯ ಕರ್ನಾಟಕ ದಿನಾಂಕ 18/11/2019

# ಬಡ್ತಿ ಮೀಸಲು ಕೌತುಕ

» ಮೊದಲ ಪುಟದಿಂದ

ಅಯೋಧ್ಯೆ ಪ್ರಕರಣದ ಪೀಠದಲ್ಲೂ ಚಂದ್ರಚೂಡ್ ಇದ್ದದ್ದರಿಂದ ಈ ಅರ್ಜಿಯತ್ತ ಗಮನ ಹರಿಸಲು ಸಾಧ್ಯವಾಗಿರಲಿಲ್ಲ. ಆದರೆ, ಮುಂದಿನ ವಾರ ಈ ಕುರಿತ ವಿಚಾರಣೆ ಆರಂಭವಾಗಲಿದ್ದು, ಬಡ್ತಿ ಮೀಸಲು ಪ್ರಕರಣ ಪುನಃ ಮುನ್ನೆಲೆಗೆ ಬರುವಂತಾಗಿದೆ.

ಸರಕಾರಿ ನೌಕರರ ಸೇವಾ ಹಿರಿತನ ನಿರ್ಧರಿಸುವುದರಲ್ಲಿ ತಮಿಳುನಾಡು ಸರಕಾರ ಅಳವಡಿಸಿಕೊಂಡಿರುವ ರೋಸ್ಟರ್ ಪಾಯಿಂಟ್ ವ್ಯವಸ್ಥೆ ಬಗ್ಗೆ ಅಲ್ಲಿನ ಹೈಕೋರ್ಟ್ ಆಕ್ಷೇಪಿಸಿದೆ. ರಾಜ್ಯದಲ್ಲೂ ಇದೇ ಪರಿಸ್ಥಿತಿಯಿದ್ದು, ಪರಿಶಿಷ್ಟರಿಗೆ ಸಂಬಂಧಿಸಿ ಶೇ.18ರ ಮೀಸಲನ್ನು ಮೀರು ವಂತೆ ಬಡ್ತಿ ನೀಡಲಾಗಿದೆ. ಪವಿತ್ರ ಜಡ್ಜ್‌ಮೆಂಟ್-2ರ ಮೇಲಿನ ಅಪ್ಲಿಕೇಷನ್ ಫಾರ್ ಡೈರೆಕ್ಷನ್ ವಿಚಾರಣೆ ವೇಳೆ ತಮಿಳುನಾಡು ಕೋರ್ಟ್‌ನ ವ್ಯಾಖ್ಯಾನವನ್ನು ಸುಪ್ರೀಂ ಕೋರ್ಟ್ ಪರಾಮರ್ಶಿಸುವ ಸಾಧ್ಯತೆ ತಳ್ಳಿಹಾಕುವಂತಿಲ್ಲ. ಈ ವಿಷಯದಲ್ಲಿ ಎಸ್‌ಸಿ, ಎಸ್‌ಟಿ ಹೊರತಾದ ವರ್ಗದ ವಕೀಲರು ವಾದ ಮಂಡಿಸುವುದೂ ಇದೆ. ಹಾಗಾಗಿ ಈ ಅರ್ಜಿಯೂ ಮಹತ್ವ ಪಡೆದುಕೊಳ್ಳಲಿದೆ.

ಪವಿತ್ರ ಪ್ರಕರಣದ ತೀರ್ಪಿನ ಬಳಿಕ ನಾನಾ ಇಲಾಖೆಯಲ್ಲಿ ಸಿದ್ಧಪಡಿಸಿದ ಜ್ಯೇಷ್ಠತಾ ಪಟ್ಟಿಯಲ್ಲೇ ಲೋಪದೋಷದ ಆರೋಪವಿದೆ. ರಾಜ್ಯದ ವೃಂದ, ನೇಮಕ ಹಾಗೂ ಸೇವಾ ಹಿರಿತನಕ್ಕೆ ಸಂಬಂಧಿಸಿದ ನಿಯಮದಂತೆ ಸಹಾಯಕ ಎಂಜಿನಿಯರ್ ಹಂತದಿಂದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಹುದ್ದೆಗೆ ಮೀಸಲಿನಡಿ ಬಡ್ತಿ ಹೊಂದಬಹುದು. ಅದಕ್ಕಿಂತ ಮೇಲಿನ ಹುದ್ದೆಗೆ ಮೀಸಲು ಪರಿಗಣಿಸುವಂತಿಲ್ಲ. ಅದೇ ರೀತಿ ಶಿರಸ್ತೇದಾರ್ ದರ್ಜೆಯಿಂದ ತಹಸೀಲ್ದಾರ್ ದರ್ಜೆಗೆ ಮೀಸಲು ಸೌಲಭ್ಯದಡಿ ಬಡ್ತಿ ಪಡೆಯಬಹುದು. ಇನ್ಸ್‌ಪೆಕ್ಟರ್ ಇದ್ದವರು ಡಿವೈಎಸ್ಪಿಯಾಗುವಾಗ ಮೀಸಲು ಬಳಸಿಕೊಳ್ಳಬಹುದು. ಟ್ರಾಫಿಕ್ ಇನ್ಸ್‌ಪೆಕ್ಟರ್ ಆಗಿದ್ದರೆ ಎಆರ್‌ಟಿಒ ಹುದ್ದೆಗೆ ಈ ಸೌಕರ್ಯದಡಿ ಪ್ರಮೋಷನ್ ಆಗಬಹುದು. ಸಚಿವಾಲಯದ ಹಿರಿಯ ಸಹಾಯಕರು ಮೀಸಲಿನಡಿ ಸೆಕ್ಷನ್ ಆಫೀಸರ್ ದರ್ಜೆಗೆ ಬಡ್ತಿ ಹೊಂದಬಹುದು. ಆದರೆ, ಈಗಿನ ಪರಿಸ್ಥಿತಿಯಲ್ಲಿ ಎಲ್ಲವೂ ಏರುಪೇರಾಗಿದೆ. ಅಪ್ಲಿಕೇಷನ್ ಫಾರ್ ಡೈರೆಕ್ಷನ್ ಕುರಿತ ವಿಚಾರಣೆ ಕೈಗೊಳ್ಳುವ ಕೋರ್ಟ್ ತಮಿಳುನಾಡು ಪ್ರಕರಣದ ಆಧಾರದಲ್ಲಿ ತೀರ್ಪು ಕೊಟ್ಟರೆ ರಾಜ್ಯದಲ್ಲಿ ಹಿಂಬಡ್ತಿ, ಮುಂಬಡ್ತಿ ಪ್ರಕ್ರಿಯೆ ಶುರುವಾಗಲಿದೆ.

ಬಡ್ತಿ ಮೀಸಲು ಪ್ರಕರಣ ಇತ್ಯರ್ಥಪಡಿಸದೇ ವೋಟ್‌ಬ್ಯಾಂಕ್ ರಾಜಕೀಯ ಮಾಡಲು ಹೋಗಿ ಹೀಗಾಗಿದೆ.

> ತಮಿಳುನಾಡು ಪ್ರಕರಣ ಭಿನ್ನವಾದುದು. ಅದು ರಾಜ್ಯದ ಮೇಲೆ ಪ್ರಭಾವ ಬೀರದು. ಸಂವಿಧಾನ ಬದ್ಧವಾಗಿ ಕ್ರಮ ಕೈಗೊಂಡರೆ ಎಲ್ಲ ಸಮಸ್ಯೆ ಬಗೆಹರಿಯಲಿದೆ.
>
> -ರಾಜ್ಯ ಸರಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ

3(b)